ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065

*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

ದಿನಾಂಕ: 20.09.2016

ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 21.09.16–25.09.16 ವರೆಗೆ)

	21.09.16	22.09.16	23.09.16	24.09.16	25.09.16
ಮಳೆ (ಮಿ ಮಿ)	9	5	4	4	5
ಗರಿಷ್ಠ ಉಷ್ಣಾಂಶ(ಡಿ.ಸೆ.)	29	28	30	29	28
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	19	19	19
ಮೋಡ (ಪ್ರಮಾಣ)	6	7	7	6	6
ಆರ್ದ್ರತೆ ೭.೨೦ ಬೆ (ಶೇ)	88	89	88	87	89
ಆರ್ದ್ರತೆ ೨.೨೦ ಮ (ಶೇ)	56	60	54	54	58
ಗಾಳಿಯ ವೇಗ (ಕಿ.ಮಿ/ಗಂಟೆಗೆ)	20	16	16	14	16
ಗಾಳಿಯ ದಿಕ್ಕು (ಡಿಗ್ರಿ)	270	260	260	260	250

ಮುಂಬರುವ 5 ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ . ದಿನದ ಗರಿಷ್ಠ ಉಷ್ಣಾಂಶ **28-30.0° ಸೆ** ಮತ್ತು ಕನಿಷ್ಠ **19.0° ಸೆ** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **87-89 %** ಇದ್ದು ಮಧ್ಯಾಹ್ನ **54-60 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **14-20** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಬೆಳೆಗಳು	ಹವಾಮಾನ ಆಧಾರಿತ ಕೃಷಿ ಸಲಹೆಗಳು
ಸಾಮಾನ್ಯ	➢ ಮುಂದಿನ ನಾಲ್ಕೈದು ದಿನಗಳಲ್ಲಿ ಸಾಧಾರಣ ಮಳೆಯ ಮುನ್ಸೂಚನೆಯಿದೆ. ➢ ಮುಂದಿನ ನಾಲ್ಕೈದು ದಿನಗಳಲ್ಲಿ ಸಾಧಾರಣ ಮಳೆಯ ಸಾಧ್ಯತೆಯಿರುವುದರಿಂದ ಇದಕ್ಕೆ ಪರ್ಯಾಯ ಬೆಳೆಗಳಾದ ಮೇವಿನ ಮುಸುಕಿನ ಜೋಳ, ಅವರೆ, ರಾಗಿ, ಅಲಸಂದೆ ಹಾಗೂ ಕಿರು ಧಾನ್ಯಗಳಾದ ನವಣೆ, ಸಜ್ಜೆ, ಇತ್ಯಾದಿ ಬೆಳೆಗಳನ್ನು ಬೆಳೆಯಬೇಕೆಂದು ಸೂಚಿಸಲಾಗಿದೆ. ➢ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಒಂದು ಬಾರಿ ಕೊಡುವುದು. ➢ ಗಾಳಿಯ ವೇಗ ಹೆಚ್ಚಾಗಿರುವುದರಿಂದ ಬಾಳೆ ಮತ್ತು ತರಕಾರಿ ಬೆಳೆಗಳಿಗೆ ರಕ್ಷಣೆ ಕ್ರಮಗಳನ್ನು ಅನುಸರಿಸಿ. ➢ ಗಾಳಿಯ ವೇಗ ಹೆಚ್ಚಾಗಿರುವುದರಿಂದ ತೋಟಗಾರಿಕೆ ಬೆಳೆಗಳಿಗೆ ಔಷದಿ ಸಿಂಪಡಣೆಯನ್ನು ಮಾಡುವಾಗ ಜಾಗ್ರತೆ ವಹಿಸಿ
ರಾಗಿ	➢ ಕಡಿಮೆ ಅವಧಿಯ ರಾಗಿ ತಳಿಗಳಾದ ಜಿಪಿಯು– 45, 48 ಮತ್ತು ಇಂಡಾಫ್–9 ತಳಿಗಳನ್ನು ಬಿತ್ತನೆ ಮಾಡಬಹುದು. ➢ ರಾಗಿಯಲ್ಲಿ ಬೆಂಕಿ ರೋಗ ಕಂಡು ಬಂದಲ್ಲಿ ಮ್ಯಾಂಕೊಜೇಬ್ @ 2 ಗ್ರಾಂ/ಲೀ ಅಥವಾ ಜೇನಾಬ್ @ 2.5 ಗ್ರಾಂ/ಲೀ ಸಿಂಪಡಿಸಿ.
ಮೆಕ್ಕೆಜೋಳ	➢ ಮಳೆ ಬಂದರೇ, ಪ್ರತಿ ಹೇಕ್ಟರ್‌ಗೆ 25 ಕಿ.ಗ್ರಾಂ ಸಾರಜನಕವನ್ನು ಮೇಲು ಗೊಬ್ಬರವಾಗಿ ಉಪಚರಿಸಿ. ➢ ತೇವಾಂಶದ ಸಂರಕ್ಷಣೆಗಾಗಿ ಇರುವಂತಹ ಕಳೆಯನ್ನು ನಿರ್ವಹಣೆ ಮಾಡಿ ಕಿತ್ತಂತಹ ಕಳೆಯನ್ನು ಭೂಮಿಗೆ ಹೊದಿಕೆ ಮಾಡಬೇಕು. ➢ ಬೆಳೆಯಲ್ಲಿ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು ಮತ್ತು ಮೇಲೆ ತಿಳಿಸಿರುವ ಬೇಸಾಯ ಕ್ರಮಗಳ ಜೊತೆಗೆ, ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ತೇವಾಂಶ ಸಿಗುವಂತಾಗುತ್ತದೆ. ➢ ತೆನೆ ಹುಳುವಿನ ಬಾಧೆ ಕಂಡು ಬಂದಲ್ಲಿ, ಮೇಲಾಥಿಯಾನ್ @ 2 ಮೀ.ಲಿ/ಲೀ ಸಿಂಪಡಿಸಿ.

	➢ ಕಾಂಡಕೊರಕದ ಹುಳುವಿನ ಹತೋಟಿಗೆ ಕ್ವಿನಾಲ್‌ಫಾಸ್‌–25 ಇ.ಸಿ. ಕೀಟನಾಶಕವನ್ನು 2 ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. ಅಥವಾ ಕ್ಲೋರೋಪೈರಿಫಾಸ್‌–20 ಇ.ಸಿ. ಕೀಟನಾಶಕವನ್ನು 2 ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ.
ತೊಗರಿ	➢ ತೇವಾಂಶದ ಸಂರಕ್ಷಣೆಗಾಗಿ ಇರುವಂತಹ ಕಳೆಯನ್ನು ನಿರ್ವಹಣೆ ಮಾಡಿ ಕಿತ್ತಂತಹ ಕಳೆಯನ್ನು ಭೂಮಿಗೆ ಹೊದಿಕೆ ಮಾಡಬೇಕು. ➢ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು . ➢ ಕಿತ್ತಂತಹ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದ ಗಿಡ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ–ಹೊದಿಕೆಯಾಗಿ ಹರಡುವುದು. ➢ ಕಾಯಿ ಕೊರಕ ಬಾಧೆ ಕಂಡು ಬಂದಲ್ಲಿ, ಇಂಡಾಕ್ಸಿಕಾರ್ಬ್ 0.5 ಮೀ.ಲಿ/ಲೀ ಅಥವಾ ಸ್ಪೈನೋಸ್ಯಾಡ್ 0.15 ಮೀ.ಲಿ/ಲೀ ಅಥವಾ ಕ್ಲೋರೋಪೈರಿಫಾಸ್ 2 ಮೀ.ಲಿ/ಲೀ ಸಿಂಪಡಿಸಿ
ಶೇಂಗಾ/ನೆಲಗಡಲೆ	➢ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು.
ಅಲಸಂದೆ ಮತ್ತು ಅವರೆ	➢ ಅಲಸಂದೆ ಬೆಳೆಯಲ್ಲಿ ಸಿ–152 ಮತ್ತು ಕೆ.ಎಮ್‌–5, ಟಿ.ವಿ.ಎಕ್ಸ್‌–944. ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ➢ ಅವರೆ: ಎಚ್‌.ಎ–3 ಮತ್ತು 4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
ಜಾನುವಾರು	
ಸಾಮಾನ್ಯ	➢ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
ಹೈನುಗಾರಿಕೆ	➢ ಜಂತು ಹುಳುಗಳ ನಿವರಣೆಗಾಗಿ ಪಶುವೈದ್ಯರ ಸಲಹೆ ಪಡೆದು ಸೂಕ್ತವಾದ ಜಂತು ನಿವಾರಕ ಔಷಧಿಯನ್ನು ಕರು ಹುಟ್ಟಿದ 7ನೆಯ ದಿನ, 1 ನೆಯ ತಿಂಗಳು , 6 ನೆಯ ತಿಂಗಳು ತಪ್ಪದೆ ಹಾಕಬೇಕು. ➢ ಹಾಲು ಕೊಡುವ ಪ್ರಾಣಿಗಳಿಗೆ ಅವು ಕೊಡುವ ಹಾಲಿನ ಆದಾರದ ಮೇಲೆ ಆಹಾರವನ್ನು ಕೋಡಬೇಕು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು